

ಸತ್ಯ, ಸೂರಿ

# ಸತ್ಯ ಈಸ್ ಇನ್ ಲವ್@ ವೆಟ್ರಿಮಾರನ್ ಗರಡಿ

**ತಮಿಳಿನ 'ವಿಡುದಲೈ' ಸಿನಿಮಾ ಮೂಲಕ ದಕ್ಷಿಣ ಭಾರತದ ಚಿತ್ರರಸಿಕರ ಗಮನಸೆಳೆದಿರುವ ಸರ್ದಾರ್ ಸತ್ಯ ಅಪ್ಪಟ ಕನ್ನಡ ಪ್ರತಿಭೆ. ವೆಟ್ರಿಮಾರನ್ ಅವರಿಂದ 'ಕನ್ನಡದ ಅರ್ಧ ಸೂಪರ್‌ಸ್ಟಾರ್' ಎನ್ನುವ ಬಣ್ಣನೆಗೊಳಗಾಗಿರುವ ಅವರೀಗ ತಮ್ಮ ವೃತ್ತಿಜೀವನದ ಮಹತ್ತರ ಹೊರಳುದಾರಿಯಲ್ಲಿದ್ದಾರೆ.**

■ ವಿಶಾಖ ಎನ್.

'ಐ ಲವ್ ಯೂ'– ಪ್ರೇಕ್ಷಕರ ಸಾಲಿನಿಂದ ಉಲಿ. ಅದನ್ನು ಕೇಳಿಸಿಕೊಂಡ ನಿರ್ದೇಶಕ ಮಣಿರತ್ನಂ ಕಮಕ್ ಕಿಮಕ್ ಅನ್ನಲಿಲ್ಲ. ಉಲಿ ಮರುಕಳಿಸಿತು. ಯಾರು ಎಂದು ನೋಡಿದರೆ, ಕನ್ನಡದ ನಟ 'ಸರ್ದಾರ್' ಸತ್ಯ. ಆರೇಳು ವರ್ಷಗಳ ಹಿಂದಿನ ಮಾತಿದು. ಮಣಿರತ್ನಂ ನಗುತ್ತಾ, 'ಐ ಟೂ ಲವ್ ಯೂ... ಪ್ರಶ್ನೆ ಕೇಳು' ಎಂದರು. 'ನನ್ನಂತಹ ನಟ ನಿಮ್ಮಂತಹ ನಿರ್ದೇಶಕರನ್ನು ತಲುಪುವುದು ಹೇಗೆ' – ಸತ್ಯ ಮುಗ್ಧತೆಯಿಂದ ಪ್ರಶ್ನೆ ಎಸೆದರು. ಒಂದು ಸಣ್ಣ ಮೌನದ ನಂತರ, 'ಸತತವಾಗಿ ಕೆಲಸ ಮಾಡುತ್ತಿರಿ, ತಲುಪಿದರೂ ತಲುಪಬಹುದು' ಎಂಬರ್ಥದ ಮಾತನ್ನು ತಮಿಳಿನಲ್ಲೇ ಕೊಂಕು ಬೆರೆಸಿದಂತೆ ಮಣಿ ಹೇಳಿದರು.

ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಹೀಗೆ ಮಣಿರತ್ನಂ ಕೂಡ ಚಕಿತಗೊಳ್ಳುವ ಪ್ರಶ್ನೆ ಹಾಕಿ, ಸಿಕ್ಕ ಉತ್ತರವನ್ನೇ ಕಣ್ಣಿಗೊತ್ತಿಕೊಂಡು ಬಂದಿದ್ದರು ಸತ್ಯ. ಈಗ ಅವರು ವೆಟ್ರಿಮಾರನ್ ನಿರ್ದೇಶನದ 'ವಿಡುದಲೈ 1' ಸಿನಿಮಾದಲ್ಲಿ ಪ್ರಮುಖ ಪೊಲೀಸ್ ಪಾತ್ರದಲ್ಲಿ ಅಭಿನಯದ ರುಜು ಹಾಕಿದ್ದಾರೆ.

'ಆಡುಕಳಂ' ಸಿನಿಮಾವನ್ನು ವೆಟ್ರಿಮಾರನ್ ನಿರ್ದೇಶಿಸಿ ದಶಕ ಕಳೆದಿದೆ. ಆಗಿನಿಂದಲೇ ಸತ್ಯ ಅವರೊಟ್ಟಿಗೆ ಕೆಲಸ ಮಾಡಬೇಕೆಂಬ ಕನಸು ಕಾಣತೊಡಗಿದರು. 'ಚಂಬಲ್' ಕನ್ನಡ ಸಿನಿಮಾದಲ್ಲಿ ನೀನಾಸಂ ಸತೀಶ್ ಜತೆ ಅಭಿನಯಿಸಿದ ಘಟ್ಟ. ಡಬ್ಬಿಂಗ್ ಮಾಡಬೇಕಿದ್ದ ಸಂದರ್ಭದಲ್ಲಿ ನಿರ್ದೇಶಕ ಜೇಕಬ್ ವರ್ಗೀಸ್ ತಿಂಗಳುಗಟ್ಟಲೆ ನಾಪತ್ತೆಯಾದರು. ಆಮೇಲೆ